# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎ. ಕೃಷ್ಣಪ್ಪ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು - ಸಂಭಾವನೆ ನೀಡುವ ಬಗ್ಗೆ.

ಓದಲಾಗಿದೆ:-

1. ಸರ್ಕಾರದ ಆದೇಶ ಸಂ. ಸಿಆಸುಇ 6 ಸೇಇವಿ 2010, ದಿನಾಂಕ. 20-04-2011.
2. ಸರ್ಕಾರದ ಆದೇಶ ಸಂ. ಗ್ರಾಅಪ 19 ಇಎನ್‌ಕ್ಯೂ 2007 (ಭಾಗ-1), ದಿನಾಂಕ. 19-10-2011 .
3. ವಿಚಾರಣಾಧಿಕಾರಿಯವರ ವರದಿ ದಿನಾಂಕ. 11-02-2013

ಪ್ರಸ್ತಾವನೆ:

ಇಲಾಖಾ ವಿಚಾರಣೆಯಲ್ಲಿ ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ವಾಹನ ಭತ್ಯೆಯೂ ಸೇರಿದಂತೆ ಒಟ್ಟು ರೂ. 15,000-00 ಗಳ ಸಂಭಾವನೆಯನ್ನು ಪಾವತಿಸಲು ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ದಿನಾಂಕ. 20-04-2011ರ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

ಶ್ರೀ ಕೆ.ತಿಪ್ಪೇಸ್ವಾಮಿ, ಅಂದಿನ ಕಾರ್ಯಪಾಲಕ ಇಂಜಿನಿಯರ್. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ, ಶ್ರೀ ಶ್ರೀಧರ್, ಅಂದಿನ ಲೆಕ್ಕಪರಿಶೋಧನಾಧಿಕಾರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ ಮತ್ತು ಶ್ರೀ ಡಿ.ಜಗದೀಶನ್, ಅಂದಿನ ಲೆಕ್ಕಪರಿಶೋಧನಾಧಿಕಾರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ ಇವರುಗಳು ಬರಪರಿಹಾರ ಕಾಮಗಾರಿಗಳಲ್ಲಿ ಪಡೆದ ಮುಂಗಡ ಹಣಕ್ಕೆ ಲೆಕ್ಕಪತ್ರ ಒದಗಿಸದೇ ದುರುಪಯೋಗಪಡಿಸಿಕೊಂಡಿರುವ ಆರೋಪಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಶ್ರೀ ಎ.ಕೃಷ್ಣಪ್ಪ, ನಿವೃತ್ತ ಜಿಲ್ಲಾ ನ್ಯಾಯಾಧೀಶವರನ್ನು ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ದಿನಾಂಕ. 19-10-2011ರ ಆದೇಶದಲ್ಲಿ ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆ ಜರುಗಿಸಿ ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ದಿನಾಂಕ. 11-02-2013ರಂದು ವಿಚಾರಣಾ ವರದಿ ಸಲ್ಲಿಸಿರುತ್ತಾರೆ. ಆದುದರಿಂದ, ವಿಚಾರಣಾಧಿಕಾರಿಗೆ ಸಂಭಾವನೆ ಮಂಜೂರು ಮಾಡಲು ಮುಂದಿನಂತೆ ಆದೇಶಿಸಿದೆ.

ಆದೇಶ ಸಂಖ್ಯೆ ಗ್ರಾಅಪ 19 ಇಎನ್‌ಕ್ಯೂ 2007, ಬೆಂಗಳೂರು, ದಿನಾಂಕ. 15-03-2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಶ್ರೀ ಎ.ಕೃಷ್ಣಪ್ಪ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು ಇವರು ಸರ್ಕಾರವು ಆದೇಶದಂತೆ ವಿಚಾರಣೆ ಜರುಗಿಸಿ ವರದಿ ಸಲ್ಲಿಸಿರುತ್ತಾರೆ. ವಿಚಾರಣಾಧಿಕಾರಿಗಳಿಗೆ ನಿಗದಿಪಡಿಸಿರುವ ರೂ. 15,000-00 (ವಾಹನ ಭತ್ಯೆಯೂ ಸೇರಿದಂತೆ) ಗಳನ್ನು ಪಾವತಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರಿಗೆ ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಸಿ.ರಾಜಪ್ಪ),
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:
1. ಮಹಾಲೇಖಪಾಲರು, ಕರ್ನಾಟಕ, (ಆಡಿಟ್ ಮತ್ತು ಅಕೌಂಟ್ಸ್), ಬೆಂಗಳೂರು.

----2

2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ - ಸದರಿ ವಿಚಾರಣಾಧಿಕಾರಿಯವರ ಹೆಸರಿಗೆ ಚೆಕ್‌ನ್ನು ಬರೆದು ಅವರ ವಿಳಾಸಕ್ಕೆ ನೊಂದಣಿ ಅಂಚೆ ಮುಖಾಂತರ ಕಳುಹಿಸುವಂತೆ ಕೋರಿದೆ.
3. ಸಹಾಯಕ ಕಾರ್ಯದರ್ಶಿ (ಆಡಳಿತ), ಜಿಲ್ಲಾ ಪಂಚಾಯತ್, ಶಿವಮೊಗ್ಗ.
4. ಶ್ರೀ ಎ.ಕೃಷ್ಣಪ್ಪ , ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಂ. 1242, 8ನೇ ಕ್ರಾಸ್, ಚಂದ್ರಾಲೇಔಟ್, ಬೆಂಗಳೂರು-40.
5. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ.
6. ಗ್ರಾ.ಅ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) / ಅಪರ ಕಾರ್ಯದರ್ಶಿ, ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
7. ಹೆಚ್ಚುವರಿ ಪ್ರತಿ:ರಕ್ಷಾ ಕಡತ: ಕಂಪ್ಯೂಟರ್ ಶಾಖೆ.